**ಡಯಟ್‌ನಲ್ಲಿ ತಯಾರಿಸುವ ಎಸ್.ಎಸ್.ಎ. ವಾರ್ಷಿಕ ಕ್ರಿಯಾ ಯೋಜನೆಯ ಒಂದು ನಮೂನೆಯನ್ನು ಗಮನಿಸಿ.**

**ಉದ್ದೇಶಗಳು:**

1. 2009-10ನೇ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಒಟ್ಟು 15 ಮಾನವ ದಿನಗಳ ತರಬೇತಿಯನ್ನು ನೀಡುವುದು.
2. ತರಬೇತಿಗಳನ್ನು ನೀಡುವಾಗ ಇಲಾಖೆಯು ಹೊರತಂದಿರುವ ಮಾಡ್ಯೂಲ್‌ಗಳನ್ನು ಬಳಸುವುದು.
3. ಪ್ರತಿ ತರಬೇತಿಯನ್ನು ಅದರ ಮೂಲ ಉದ್ದೇಶಗಳಿಗನುಗುಣವಾಗಿ ನೀಡಲು ಯೋಜನೆಯನ್ನು ಕ್ಲಸ್ಟರ್ ಮತ್ತು ಬ್ಲಾಕ್ ಹಂತದಲ್ಲಿ ತಯಾರಿಸಿಕೊಳ್ಳುವುದು.
4. ಇಲಾಖೆಯ ನಿರ್ದೇಶನಗಳಿಗನುಗುಣವಾಗಿ ತರಬೇತಿಗಳನ್ನು ಆಯೋಜಿಸುವುದು.
5. ತರಬೇತಿಗೆ ನಿಯೋಜಿಸಲ್ಪಡುವ ಶಿಕ್ಷಕರುಗಳ ಪಟ್ಟಿಯನ್ನು ಮೊದಲೇ ಪ್ರಕಟಪಡಿಸಿ, ನಿಯೋಜಿಸಿದ ಎಲ್ಲಾ ಶಿಕ್ಷಕರು ತರಬೇತಿಗೆ ಹಾಜರಾಗುವಂತೆ ಗಮನ ಹರಿಸುವುದು.
6. 2009ನೇ ಏಪ್ರಿಲ್ ನಿಂದ 2010ನೇ ಮಾರ್ಚ್ ತಿಂಗಳೊಳಗೆ ನಿಗಧಿತ ತರಬೇತಿಗಳನ್ನು ಪೂರ್ಣಗೊಳಿಸುವುದು.

**ಬ್ಲಾಕ್‌ವಾರು ಶಿಕ್ಷಕರ ವಿವರಗಳು**

**ಜಿಲ್ಲೆ:**

| ಕ್ರಮ ಸಂಖ್ಯೆ | ಬ್ಲಾಕ್ | ಶಿಕ್ಷಕರ ಸಂಖ್ಯೆ | | | | ಎಸ್.ಡಿ.ಎಂ.ಸಿ. ಸದಸ್ಯರು | ಸಿ.ಎ.ಸಿ. ಸದಸ್ಯರು |
|---|---|---|---|---|---|---|---|
| | | ಸರ್ಕಾರಿ ಶಾಲೆ | | ಅನುದಾನಿತ ಶಾಲೆ | | | |
| | | ಕಿ.ಪ್ರಾ.ಶಾ | ಹಿ.ಪ್ರ.ಶಾ | ಕಿ.ಪ್ರಾ.ಶಾ | ಹಿ.ಪ್ರ.ಶಾ | | |
| 01. | | | | | | | |
| 02. | | | | | | | |
| 03. | | | | | | | |
| 04. | | | | | | | |
| 05. | | | | | | | |

**ಪ್ಯಾಕೇಜ್‌ವಾರು ತರಬೇತಿ ವಿವರಗಳು:**

(ವಿ.ಸೂ: ತರಬೇತಿ ಪ್ಯಾಕೇಜ್‌ಗಳಿಗಾಗಿ ಡಿ.ಎಸ್.ಇ.ಆರ್.ಟಿಯು ನೀಡುವ ಸುತ್ತೋಲೆಗಳನ್ನು ಗಮನಿಸುವುದು.)

ಪ್ಯಾಕೇಜ್ 1 (ಪ್ರಾಥಮಿಕ/ಹಿರಿಯ ಪ್ರಾಥಮಿಕ ಶಿಕ್ಷಕರು)

| ಕ್ರಮ ಸಂಖ್ಯೆ | ತರಬೇತಿ ವಿವರಗಳು | ಅವಧಿ (ದಿನ) | ಶಿಕ್ಷಕರ ಸಂಖ್ಯೆ | ಮಾನವ ದಿನಗಳು | ವೆಚ್ಚ |
|---|---|---|---|---|---|
| | | | | | |

ಇದೇ ರೀತಿ ಹಿಂದಿ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಇವರುಗಳಿಗೆ ಬೇರೆ ಬೇರೆ ಪ್ಯಾಕೇಜುಗಳನ್ನು ಸಿದ್ಧಪಡಿಸುವುದು.

**ಮೇಲ್ವಿಚಾರಣೆ:** ತರಬೇತಿಗಳ ಮೇಲ್ವಿಚಾರಣೆಯನ್ನು ಸಿ.ಎ.ಇ.ಒ., ಬಿ.ಆರ್.ಸಿ., ಸಂಯೋಜಕರು, ಬಿ.ಆರ್.ಪಿ/ಸಿ.ಆರ್.ಪಿಗಳವರು ಮಾಡಬೇಕಾಗುತ್ತದೆ. ಮೇಲ್ವಿಚಾರಣೆಯಲ್ಲಿ ಈ ಕೆಳಗೆ ಸೂಚಿಸಿರುವ ಅಂಶಗಳನ್ನು ಗಮನಿಸಿ ಟಿಪ್ಪಣಿ ನೀಡಬೇಕು.

**ತರಬೇತಿಗೆ ಮುಂಚೆ:**

- ಸಂಬಂಧಿಸಿದ ಎಲ್ಲಾ ಶಿಕ್ಷಕರಿಗೂ ತರಬೇತಿಯ ಮಾಹಿತಿ ತಲುಪಿದೆಯೆ?
- ತರಬೇತಿ ಸ್ಥಳದಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆಯೆ?
- ತರಬೇತಿ ವೇಳಾಪಟ್ಟಿಯನ್ನು ತಯಾರಿಸಲಾಗಿದ್ದು, ಸಂಪನ್ಮೂಲ ವ್ಯಕ್ತಿಗಳಗೆ ಮಾಹಿತಿ ನೀಡಲಾಗಿದೆಯೆ?
- ಸಂಪನ್ಮೂಲ ಸಾಹಿತ್ಯ, ಬೋಧನಾ ಸಾಮಗ್ರಿಗಳನ್ನು ಸೂಕ್ತವಾಗಿ ಹೊಂದಿಸಿಕೊಳ್ಳಲಾಗಿದೆಯೆ?

**ತರಬೇತಿ ಸಮಯದಲ್ಲಿ:**

- ನಿಗಧಿತ ವೇಳೆಗೆ ಎಲ್ಲಾ ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳು ಹಾಜರಿದ್ದರೆ?
- ತರಬೇತಿಯು ಯೋಜನೆಗನುಸಾರವಾಗಿ ನಡೆಯುತ್ತಿದೆಯೆ?
- ತರಬೇತಿಯಲ್ಲಿ ಅನುಸರಿಸುತ್ತಿರುವ ಕ್ರಮ  ಉಪನ್ಯಾಸ/ಚರ್ಚೆ/ಚಟುವಟಿಕೆ ಇತ್ಯಾದಿ.
- ಶಿಬಿರಾರ್ಥಿಗಳ ಪಾಲ್ಗೊಳ್ಳುವಿಕೆ ಹೇಗಿದೆ? ಮುಂತಾದ ಅಂಶಗಳು.

**ತರಬೇತಿಯ ನಂತರ: (ಅನುಪಾಲನೆ)**

- ತರಬೇತಿಯಲ್ಲಿ ಪಡೆದುಕೊಂಡ ಜ್ಞಾನ ತರಗತಿಗಳಲ್ಲಿ ಬಳಕೆಯಾಗುತ್ತದೆಯೆ?
- ತರಬೇತಿಯ ಅನುಭವಗಳು ಶಾಲಾ ಸನ್ನಿವೇಶದಲ್ಲಿ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿವೆ?
- ತರಬೇತಿಯಲ್ಲಿ  ಇನ್ನೂ ಸುಧಾರಿಸ ಬೇಕಾದ ಅಂಶಗಳು ಯಾವುವು?

ಮೇಲೆ ಸೂಚ್ಯವಾಗಿ ಮಾದರಿಯೊಂದನ್ನು ನೀಡಿದೆ. ಇದರ ಆಧಾರದ ಮೇಲೆ ನಿಮ್ಮ ಜಿಲ್ಲೆಯ ತರಬೇತಿ ಕ್ರಿಯಾಯೋಜನೆಯೊಂದನ್ನು ತಯಾರಿಸಿ. ಅದರ ತಯಾರಿಕೆಗೆ ಸಂಬಂಧಿಸಿದಂತೆ ನಿಮ್ಮ ಅನುಭವ/ಅಭಿಪ್ರಾಯಗಳನ್ನು ನೀಡಿರಿ.

1. ನೀವು ಶಾಲೆಗಳಿಗೆ ಭೇಟಿ ನೀಡಿದ ಶಾಲೆಗಳಲ್ಲಿ ಸಂಸ್ಥಾ ಯೋಜನೆಯನ್ನು ಸಿದ್ಧಪಡಿಸಿಲಾಗಿದೆಯ? ಯೋಜನೆಯ ವಿಶೇಷತೆಗಳನ್ನು ತಿಳಿಸಿ.

(ಅ). ಸಂಸ್ಥಾ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಅಂಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಎದುರಾಗುವ ಅಡೆತಡೆಗಳನ್ನು ಶಾಲೆಯ ಮುಖ್ಯಸ್ಥರೊಡನೆ ಚರ್ಚಿಸಿ, ಅಭಿಪ್ರಾಯಗಳನ್ನು ಸಂಗ್ರಹಿಸಿ.

(ಆ). ಶಾಲೆಯ ಸಂಸ್ಥಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಮುದಾಯದವರ ಕೊಡುಗೆಯೇನು?